


ಉದಯವಾಣಿ
ಜನಮನದ ಜೀವನಾಡಿ
ಮಣಿಪಾಲ । ಬೆಂಗಳೂರು । ಹುಬ್ಬಳ್ಳಿ । ಕಲಬುರಗಿ । ದಾವಣಗೆರೆ । ಮುಂಬಯಿ



Regd.No.UDP/1259/2015-17 | udayavani.com | UDAYAVANI – KANNADA DAILY – MANIPAL ಮಣಿಪಾಲ, ಸೋಮವಾರ, ಡಿಸೆಂಬರ್ 18, 2017 ಬೆಲೆ: ₹ 5-00 ವಿದೇಶ ಬೆಲೆ: ₹ 6-00

# ಲಕ್ಷ ಎಂಜಿನಿಯರಿಂಗ್ ಸೀಟುಗಳು ಖೋತಾ

## ■ ಮುಂದಿನ ಶೈಕ್ಷಣಿಕ ವರ್ಷದಿಂದ ಜಾರಿ ಸಂಭವ

**ಹೊಸದಿಲ್ಲಿ, ಡಿ. 17: ಎಂಜಿನಿಯರಿಂಗ್ ವಿಭಾಗವನ್ನೇ ಆಯ್ದುಕೊಂಡು ಅಧ್ಯಯನ ನಡೆಸುವ ವಿದ್ಯಾರ್ಥಿಗಳೇ ಗಮನಿಸಿ. 2018-19ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸಹಿತ ದೇಶಾದ್ಯಂತ ಒಂದು ಲಕ್ಷ ಸೀಟುಗಳು ಖೋತಾ ಆಗಲಿವೆ. ಅಷ್ಟೇ ಅಲ್ಲ, ಐದು ವರ್ಷಗಳಲ್ಲಿ ಯಾವ ತಾಂತ್ರಿಕ ಕೋರ್ಸ್‌ಗಳಿಗೆ ಶೇ.30ರಷ್ಟು ಕಡಿಮೆ ಪ್ರಮಾಣದಲ್ಲಿ ಪ್ರವೇಶಾತಿ ಆಗಿದೆಯೋ 2018ರ ಜುಲೈಯಿಂದ ಅಂಥವುಗಳನ್ನು ಮುಚ್ಚಲಾಗುತ್ತದೆ. ಹೀಗೆಂದು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅಧ್ಯಕ್ಷ ಅನಿಲ್ ಸಹಸ್ರಬುದ್ಧೆ ತಿಳಿಸಿದ್ದಾರೆ ಎಂದು 'ಸಂಡೇ ಇಂಡಿಯನ್ ಎಕ್ಸ್‌ಪ್ರೆಸ್' ವರದಿ ಮಾಡಿದೆ.**

ಕಳೆದ ಶುಕ್ರವಾರ ಬಿಡುಗಡೆ ಮಾಡಲಾಗಿರುವ ಎಂಜಿನಿಯರಿಂಗ್ ಶಿಕ್ಷಣದ ಕುರಿತಾದ ಕೈಪಿಡಿಯಲ್ಲಿ ಹೊಸ ಕಾಲೇಜು ಸ್ಥಾಪನೆಗೆ ಅನುಮತಿ ನೀಡುವುದರ ಬಗ್ಗೆ ರಾಜ್ಯ ಸರಕಾರಗಳು ತೀರ್ಮಾನ ಕೈಗೊಳ್ಳಬಾರದು ಎಂದು ಶಿಫಾರಸು ಮಾಡಲಾಗಿದೆ. ಒಂದು ವೇಳೆ ಯಾವುದೇ ತಾತ್ಕಾಲಿಕ ಯೋಜನೆಯಂತೆ ರಾಜ್ಯಗಳಲ್ಲಿ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆಗೆ ಅನುಮತಿ ನೀಡಿದಲ್ಲಿ ಅದಕ್ಕೆ ಎಐಸಿಟಿಇಯಿಂದ ಮಾನ್ಯತೆ ನಿರಾಕರಿಸಲಾಗುತ್ತದೆ. ಕೈಗಾರಿಕೆ ಕ್ಷೇತ್ರದಲ್ಲಿ ಸೃಷ್ಟಿಯಾಗುವ ಉದ್ಯೋಗ ಪರಿಸ್ಥಿತಿ ಮತ್ತು ಶಿಕ್ಷಣ ಕ್ಷೇತ್ರದಲ್ಲಿರುವ ಸೀಟುಗಳ ಮೂಲಕ ಎಷ್ಟು ಮಂದಿ ಎಂಜಿನಿಯರ್‌ಗಳಿಗೆ ಬೇಡಿಕೆ ಇದೆ ಎಂಬ ವಿಚಾರ ಗೊತ್ತಾಗುತ್ತದೆ.

**ಬೇಕು ಅನುಮತಿ:** ಕೈಪಿಡಿಯಲ್ಲಿ ಉಲ್ಲೇಖಿಸಲಾಗಿರುವ ಗಮನಾರ್ಹ ಅಂಶವೆಂದರೆ ಡೀಮ್ಡ್ ವಿವಿಗಳು ಆರಂಭಿಸುವ ತಾಂತ್ರಿಕ ಕೋರ್ಸ್ ಗಳಿಗೆ ಕೂಡ ಎಐಸಿಟಿಇಯಿಂದ ಅನುಮತಿ ಪಡೆಯಬೇಕು. ಇದುವರೆಗೆ ಅವುಗಳು ವಿಶ್ವ ವಿದ್ಯಾನಿಲಯ ಧನ ಸಹಾಯ ಆಯೋಗ (ಯುಜಿಸಿ) ವ್ಯಾಪ್ತಿಯಲ್ಲಿ ಇದ್ದುದರಿಂದ ಎಐಸಿಟಿಇ ಆದೇಶ ಪಾಲನೆ ಮಾಡಬೇಕಾಗಿರಲಿಲ್ಲ. ಹೀಗಾಗಿಯೇ ದೇಶಾದ್ಯಂತ ಎಂಜಿನಿಯರಿಂಗ್ ಕಾಲೇಜುಗಳು ಹೆಚ್ಚಿನ ಸಂಖ್ಯೆಯಲ್ಲಿ ಆರಂಭವಾಗಿದ್ದವು.

ಕೈಗಾರಿಕಾ ಕ್ಷೇತ್ರದ ಅಗತ್ಯ, ಎಂಜಿನಿಯರಿಂಗ್ ವಿದ್ಯಾರ್ಥಿಗಳಲ್ಲಿನ ಪರಿಣತಿ ಸಹಕಾರಿಯಾಗದೆ ಇರುವುದು ಎಂಜಿನಿಯರಿಂಗ್ ಪದವೀಧರರಿಗೆ ಬೇಡಿಕೆ ಕಡಿಮೆಯಾಗಲು ಕಾರಣವಾಯಿತು. ಹೀಗಾಗಿ ಎಐಸಿಟಿಇ ಮುಂದಿನ ಶೈಕ್ಷಣಿಕ ವರ್ಷದಿಂದ ಒಂದು ಲಕ್ಷ ಸೀಟುಗಳನ್ನು ಕಡಿತ ಮಾಡಲು ನಿರ್ಧರಿಸಿದೆ.

ಸೋಮವಾರ, ಡಿಸೆಂಬರ್ 18, 2017 | ಮಂಗಳೂರು | ₹ 5.00 | ಸಂಪುಟ 19 | ಸಂಚಿಕೆ 348 | ಪುಟ 20+2+4
www.prajavani.net
f /prajavani.net @pr

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

CENTRAL LIBRARY
Aoyar, Mangalore

ಆಟ ಅಂಕ
ಏಕದಿನ, ಟ್ವೆಂಟಿ–20 ಮತ್ತು ಟೆಸ್ಟ್ ಮಾದರಿಗಳಲ್ಲಿ ಬ್ಯಾಟ್ಸ್‌ಮನ್‌ಗಳದ್ದೇ ಅಬ್ಬರ



ಸೌರ ಇಂಧನ ಗ್ರಾಮವಾಗುವತ್ತ ಶಿರಗುಪ್ಪಿ 5
ದಕ್ಷಿಣಕನ್ನಡ ಜಿಲ್ಲೆ ಅಪೌಷ್ಟಿಕ ಮುಕ್ತ 7
ಶ್ರೀಲಂಕಾ ಎದುರಿನ ಏಕದಿನ ಕ್ರಿಕೆಟ್
ರೋಹಿತ್ ಬಳಗಕ್ಕೆ ಗೆಲುವು; ಧವನ್ ಸರಣಿ ಶ್ರೇಷ್ಠ 14

# ಸಂಬಳ ಕೊಡದಿದ್ದರೆ ಮಾನ್ಯತೆ ರದ್ದು

## ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಎಐಸಿಟಿಇ ಅಂಕುಶ; ಪರಿಷ್ಕೃತ ನಿಯಮಗಳು ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಹನ್ನೆರಡು ತಿಂಗಳಿಗೂ ಹೆಚ್ಚು ಕಾಲ ಬೋಧಕ ಸಿಬ್ಬಂದಿಗೆ ನಿಗದಿತ ವೇತನವನ್ನು ನಿಯಮಿತವಾಗಿ ನೀಡದೇ ಇರುವ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಇನ್ನು ಸಂಕಷ್ಟಕ್ಕೆ ಸಿಲುಕಬೇಕಾದೀತು. ಮಾತ್ರವಲ್ಲ, ಮಾನ್ಯತೆಯನ್ನೇ ಕಳೆದುಕೊಳ್ಳಬೇಕಾದೀತು.

ಪ್ರವೇಶ ನೀಡಲು ಅನುಮತಿ ಪಡೆದುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳನ್ನು ದಾಖಲು ಮಾಡಿಕೊಂಡಿರುವ ಸಂಸ್ಥೆಗಳು ಕೂಡ ಭಾರಿ ದಂಡವನ್ನು ತೆರಬೇಕಾದೀತು.

ಇಂತಹ ಪ್ರಕರಣಗಳಲ್ಲಿ ಎಂಜಿನಿಯರಿಂಗ್, ಮ್ಯಾನೇಜ್‌ಮೆಂಟ್ ಹಾಗೂ ಇತರ ತಾಂತ್ರಿಕ ಕೋರ್ಸ್‌ಗಳನ್ನು ನೀಡುವ ಶಿಕ್ಷಣ ಸಂಸ್ಥೆಗಳ ಮೇಲೆ ಕಠಿಣ ಕ್ರಮ ಕೈಗೊಳ್ಳುವ ನಿಯಮಗಳನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಜಾರಿಗೆ ತಂದಿದೆ.

'ಎಐಸಿಟಿಇ (ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಮಾನ್ಯತೆ) (ಮೊದಲ ತಿದ್ದುಪಡಿ) ನಿಯಂತ್ರಣ-2017' ಜಾರಿಗೊಳಿಸಿ ಈ ತಿಂಗಳ ಆರಂಭದಲ್ಲಿ ಅಧಿಸೂಚನೆ ಹೊರಡಿಸಲಾಗಿದೆ.

ಇದರ ಪ್ರಕಾರ, ನಿಗದಿಗಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡರೆ ಪ್ರತಿ ವಿದ್ಯಾರ್ಥಿಯಿಂದ ಸಂಗ್ರಹಿಸಲಾಗಿರುವ ಶುಲ್ಕದ ಐದು ಪಟ್ಟು ದಂಡವನ್ನು ಸಂಸ್ಥೆಗಳಿಗೆ ವಿಧಿಸಲಾಗುತ್ತದೆ.

**ಕಠಿಣ ಕ್ರಮ:** ಸಂಸ್ಥೆಗಳು ಹೊಂದಿರುವ ಮೂಲಸೌಕರ್ಯ ಮತ್ತು ಸೌಲಭ್ಯಗಳನ್ನು ಭೌತಿಕವಾಗಿ ಪರಿಶೀಲಿಸಲು ಎಐಸಿಟಿಇ ಇನ್ನು ಮುಂದೆ ಕಷ್ಟ ಪಡಬೇಕಾಗಿಲ್ಲ.

ಮೂಲಸೌಕರ್ಯ ಹಾಗೂ ಸೌಲಭ್ಯಗಳ ಭೌತಿಕ ಪರಿಶೀಲನೆಗಾಗಿ ಎಐಸಿಟಿಇ ಕಳುಹಿಸುವ ತಜ್ಞರಿಗೆ ತಮ್ಮ ಕಾರ್ಯನಿರ್ವಹಿಸಲು ಅವಕಾಶ ನಿರಾಕರಿಸುವ ಸಂಸ್ಥೆಗಳ ವಿರುದ್ಧ ಅತ್ಯಂತ ಕಠಿಣ ಕ್ರಮ ಕೈಗೊಳ್ಳಲು ಅನುವು ಮಾಡುವ ನಿಯಮವನ್ನು ಹೊಸ ನಿಯಮಾವಳಿಯಲ್ಲಿ ಸೇರಿಸಲಾಗಿದೆ.

ಇಂತಹ ಸಂಸ್ಥೆಗಳು ಒಂದು ವರ್ಷದ ಅವಧಿಗೆ ವಿದ್ಯಾರ್ಥಿಗಳನ್ನು ದಾಖಲು ಮಾಡುವುದಕ್ಕೆ ಮಂಡಳಿ ನಿರ್ಬಂಧ ಹೇರಬಹುದು ಅಥವಾ ಸಂಸ್ಥೆಗಳ ಮಾನ್ಯತೆಯನ್ನೇ ರದ್ದುಪಡಿಸಬಹುದು ಎಂದು ಅಧಿಕೃತ ಮೂಲಗಳು ಹೇಳಿವೆ.

ಎಐಸಿಟಿಇ ನಿಗದಿಪಡಿಸಿರುವಂತಹ ವೇತನ ಶ್ರೇಣಿಯ ಅನ್ವಯ 12 ತಿಂಗಳುಗಳಿಗಿಂತಲೂ ಹೆಚ್ಚಿನ ಅವಧಿಗೆ ವೇತನ ನೀಡದಿದ್ದರೆ, ನಿಗದಿತ ಶೈಕ್ಷಣಿಕ ಅರ್ಹತೆ ಹೊಂದಿರುವ ಬೋಧಕರು ಇರದಿದ್ದರೆ ಮತ್ತು ವಿದ್ಯಾರ್ಥಿಗಳು ಬೋಧಕರ ನಡುವಣ ನಿಗದಿತ ಅನುಪಾತವನ್ನು ಕಾಪಾಡಿಕೊಳ್ಳದಿದ್ದರೆ, ಅಂತಹ ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬಹುದು.

ನಿಯಮ ಉಲ್ಲಂಘಿಸಿದರೆ, ಅನಿವಾಸಿ ಭಾರತೀಯ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡಿಕೊಳ್ಳುವ ಸಂಸ್ಥೆಯ ಅವಕಾಶ ರದ್ದು ಮಾಡಬಹುದು. ಅಥವಾ ಹಂಚಿಕೆ ಮಾಡಿರುವ ಹೆಚ್ಚುವರಿ ಸೀಟುಗಳನ್ನು ರದ್ದುಗೊಳಿಸಬಹುದು ಮತ್ತು ದಾಖಲು ಮಾಡಿಕೊಳ್ಳಬಹುದಾದ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿತಗೊಳಿಸಬಹುದು.

ಮಾತ್ರವಲ್ಲದೇ, ವರ್ಷದ ಮಟ್ಟಿಗೆ ವಿದ್ಯಾರ್ಥಿಗಳ ದಾಖಲಾತಿಗೆ ನಿರ್ಬಂಧ ಹೇರಬಹುದು ಅಥವಾ ಸಂಸ್ಥೆಗಳು ಮತ್ತು ಅದು ನೀಡುವ ಕೋರ್ಸ್‌ಗಳ ಮಾನ್ಯತೆ ರದ್ದುಗೊಳಿಸುವುದಕ್ಕೂ ಅವಕಾಶ ಇದೆ.

### ಬೋಧಕ–ವಿದ್ಯಾರ್ಥಿಗಳ ಅನುಪಾತ

1. ಎಂಜಿನಿಯರಿಂಗ್ ಮತ್ತು ತಂತ್ರಜ್ಞಾನ (ಬಿಇ/ಬಿಟೆಕ್), ಫಾರ್ಮಸಿ ಮತ್ತು ಮ್ಯಾನೇಜ್‌ಮೆಂಟ್ ವಿಷಯಗಳ ಪದವಿ ಕೋರ್ಸ್‌ಗಳಲ್ಲಿ ಬೋಧಕ ಮತ್ತು ವಿದ್ಯಾರ್ಥಿಗಳ ಅನುಪಾತ 1:15 ಇರಬೇಕು
2. ತಾಂತ್ರಿಕ ಶಿಕ್ಷಣದಲ್ಲಿ ಸ್ನಾತಕೋತ್ತರ ಪದವಿ ಅಥವಾ ಎಂ.ಟೆಕ್ ಕೋರ್ಸ್‌ಗಳಲ್ಲಿ ಈ ಅನುಪಾತ 1:12 ಇರಬೇಕು.
3. ವಾಸ್ತುಶಿಲ್ಪ ಶಾಸ್ತ್ರದಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಬೋಧಕ ಮತ್ತು ವಿದ್ಯಾರ್ಥಿಗಳು 1:10ರ ಅನುಪಾತದಲ್ಲಿರಬೇಕು.